**ಅಸಲು ದಾವ ಸಂಖ್ಯೆ: 1141/2015**

**ಪಿ.ಡಬ್ಲೂ -1**

ದಿಃ 03-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1(ಎ) ರಿಂದ (ಸಿ) ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಆರ್ ಎಚ್ ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಕೆ ಎಮ್ ಕೆ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.300/-ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ಸರ್ವೆ ನಂಬರ 144/2 ರ ಉತಾರದಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರು ಉತಾರದಲ್ಲಿ ನಮೂದಾಗಿ ಸುಮಾರು 10 ವರ್ಷಗಳಾಗಿದೆ. ಸದರಿ ಉತಾರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಸರ್ವೆ ನಂಬರ 144/2 ರ ಉತಾರದಲ್ಲಿ ನನ್ನ ಹೆಸರು ಇರುವುದೇ ಇಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂಬರ 144/2ಎ ರ ಉತಾರದಲ್ಲಿಯೂ ಸಹ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರು ಉತಾರದಲ್ಲಿ ಯಾವಾಗ ನಮೂದಾಯಿತು ಹಾಗೂ ಯಾವ ಆಧಾರದ ಮೇಲೆ ನಮೂದು ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ 144/7 ರ ಜಮೀನಿನನ್ನು ಮಾರಾಟ ಮಾಡಲಾಗಿಯೋ ಇಲ್ಲವೋ ಎಂದರೆ ಸಾಕ್ಷಿಯು ಸದರಿ ಸರ್ವೆ ನಂಬರ

ಜಮೀನಿನ ಪೈಕಿ ನನ್ನ ಮಾಲೀಕತ್ವದಲ್ಲಿ ಇದ್ದ 5 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 144/7 ರಲ್ಲಿ ಒಟ್ಟು ಎಷ್ಟು ವಿಸ್ತಿರ್ಣ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ 144 ರಲ್ಲಿ ಒಟ್ಟು 6 ಹಿಸ್ಸಾ ಇರುತ್ತದೆ. ಪ್ರತಿಯೊಂದು ಹಿಸ್ಸಾ ನಂಬರನಲ್ಲಿ 18 ಗುಂಟೆ, 20 ಗುಂಟೆ ಹೀಗೆ ಇರುತ್ತದೆ. ಸರ್ವೆ ನಂಬರ 144/2 ರ ಹಿಸ್ಸೆಯಲ್ಲಿ 24 ಗುಂಟೆ ಜಮೀನು ಇರುತ್ತದೆ. ಹಿಸ್ಸಾ ನಂಬರ 3 ರಲ್ಲಿ ಎಷ್ಟು ಇರುತ್ತದೆ ಎಂದು ನಾನು ಅಭ್ಯಾಸ ಮಾಡಿರುವುದಿಲ್ಲ. ಹಿಸ್ಸಾ ನಂಬರ 4 ರಲ್ಲಿ 18 ಗುಂಟೆ ಜಮೀನು ಇರುತ್ತದೆ. ಹಿಸ್ಸಾ ನಂಬರ 5 ರಲ್ಲಿ 18 ಗುಂಟೆ ಹಾಗೂ ಹಿಸ್ಸಾ ನಂಬರ 6 ರಲ್ಲಿ 20 ಗುಂಟೆ ಜಮೀನು ಇರುತ್ತದೆ. ಹಿಸ್ಸಾ ನಂಬರ 7 ರಲ್ಲಿ ಎಷ್ಟು ಗುಂಟೆ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಮ್ಯುಟೇಶನ ಡೈರಿ ಸಂಖ್ಯೆ 3360 ರ ಪ್ರಕಾರ ಸರ್ವೆ ನಂಬರ 144/2 ರಲ್ಲಿ 11 ಗುಂಟೆ ಜಮೀನಿಗೆ ದತ್ತಾ ಮಾರುತಿ ಪಾಟೀಲ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು ಇತ್ತೀಚೆಗೆ ನಮೂದಾಗಿರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂಬರ 144/3 ರಲ್ಲಿ 5 ಗುಂಟೆ ಜಮೀನಿಗೆ ರಾಮಚಂದ್ರ ಲಕ್ಷ್ಮಣ ಪಾಟೀಲ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ 144/4 ರಲ್ಲಿ 4 ಗುಂಟೆ ಜಮೀನಿಗೆ ಗಾವಡು ಗಣಪತಿ ಪಾಟೀಲ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ 144/7 ರಲ್ಲಿ 14 ಗುಂಟೆ ಜಮೀನಿಗೆ ಸಾತಪ್ಪ ಲಕ್ಷ್ಮಣ ಜಾಂಗಳೆ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಜಾಂಗಳೆ ರವರಿಂದ ತನ್ನ ಅಜ್ಜ ಜಮೀನು ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ನಾನು ಜಾಂಗಳೆ ರವರಿಂದ ಜಮೀನು ಖರೀದಿಸಿದ ಬಗ್ಗೆ ಖರೀದಿ ಪತ್ರವನ್ನು ಹಾಜರುಪಡಿಸಿರುತ್ತೀನಾ ಎಂದರೆ ಸಾಕ್ಷಿಯು ಅದನ್ನು ತನ್ನ ವಕೀಲರಿಗೆ ಕೊಟ್ಟಿರುವುದಾಗಿ ನುಡಿಯುತ್ತಾರೆ. ಮ್ಯುಟೇಶನ ಡೈರಿ ಸಂಖ್ಯೆ 3360 ರ ನಮೂದನ್ನು ನಾನು ಇಲ್ಲಿಯವರೆಗೂ ತಕರಾರು ಅಥವಾ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ.

2. ಸರ್ವೆ ನಂಬರ 144/3 ರಲ್ಲಿ 5 ಗುಂಟೆ ಜಮೀನಿಗೆ ನನ್ನ ಹೆಸರು ಉತಾರದಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ 5 ಗುಂಟೆ ಜಮೀನನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ 144/3, 144/4, ಮತ್ತು 144/7 ರಲ್ಲಿ ಮನೆಗಳನ್ನು ಕಟ್ಟಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆ ಹೊರತಪಡಿಸಿ ಖಾಲಿ ಜಾಗ ಸಹ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 144/3, 144/4 ಹಾಗೂ 144/7 ರಲ್ಲಿ ಎಷ್ಟು ಖಾಲಿ ಜಾಗ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ 144/2 ರಲ್ಲಿಯು ಸಹ ಮನೆಗಳು ಇರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂಬರ 144/2 ರಲ್ಲಿ ನನ್ನ ಪ್ರಕಾರ ಖಾಲಿ ಜಾಗವೇ ಇರುತ್ತದೆ. ಸರ್ವೆ ನಂಬರ 144/2 ರ ಜಮೀನು ಉತ್ತರ ದಿಕ್ಕಿಗೆ ಬರುತ್ತದೆ. ಸದರಿ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಯಾವ ಜಮೀನಿನ ಉತ್ತರ ದಿಕ್ಕಿಗೆ ಸರ್ವೆ ನಂಬರ 144/2 ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಈ ಸರ್ವೆ ನಂಬರ 144 ರ ನಕಾಶೆ ನೋಡುತ್ತಿದ್ದೇನೆ. ಸಾಕ್ಷಿಯು ಅದನ್ನು ಒಪ್ಪಿ ದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಕಾಶೆಯಲ್ಲಿ ಸರ್ವೆ ನಂಬರ 144/2 ಮತ್ತು 144/7 ರಲ್ಲಿ ಪಶ್ಚಿಮ ದಿಕ್ಕಿನ ಕಡೆ ಖಾಲಿ ಜಾಗದಲ್ಲಿ ಪ್ರತಿವಾದಿಯರು ಮಾಲೀಕತ್ವ ಹೊಂದಿ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಆ ರೀತಿ ಕಬ್ಜೆಯಲ್ಲಿ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**